59. ಸಂತ ಕಬೀರ್‌ದಾಸ್ ಮಧುರಾಬಾಯಿ ಮೆಮೋರಿಯಲ್ ಹಿರಿಯ ಪ್ರಾಥಮಿಕ ಶಾಲೆ, ಹಲಸಿ
60. ಶಾಂತಿನಿಕೇತನ ಪ್ರಾಥಮಿಕ ಶಾಲೆ, ಬಾಂತಬ್ರಾ
61. ಇಂದಿರಾ ಪ್ರಾಥಮಿಕ ಶಾಲೆ, ನಿಹುದಗಿ
62. ವಿಷ್ಣುವರ್ಧನ್ ಪ್ರಾಥಮಿಕ ಶಾಲೆ, ನಜರತ್ ಕಾಲೋನಿ
63. ಕನ್ನಡ ಮಾತಾ ಪ್ರಾಥಮಿಕ ಶಾಲೆ, ಪಾವನಗೇರಿ
64. ರಮಾಬಾಯಿ ಅಂಬೇಡ್ಕರ್ ಪ್ರಾಥಮಿಕ ಶಾಲೆ, ಬೆದ್ರಿ
65. ವಿದ್ಯಾಭಾರತ ಕನ್ನಡ ಹಿರಿಯ ಪ್ರಾಥಮಿಕ ಶಾಲೆ, ಕುಂಟೆ ಸಿಸಿ

ಕ್ರಮಸಂಖ್ಯೆ:
1 ರಿಂದ 33ರವರೆಗಿನ (ಪ್ರಾಥಮಿಕ) ಪ್ರಾರಂಭದ ದಿನಾಂಕದಿಂದ ಅನುದಾನಕ್ಕೆ ಒಳಪಟ್ಟಿದೆ.

ಕ್ರಮಸಂಖ್ಯೆ:
34ರಿಂದ 38ರವರೆಗಿನ ಪ್ರಾಥಮಿಕ ಶಾಲೆಗಳು ಆದೇಶದ ದಿನಾಂಕದಿಂದ ಅನುದಾನಕ್ಕೆ ಒಳಪಟ್ಟಿದ

ಕ್ರಮಸಂಖ್ಯೆ:
39 ರಿಂದ 65ರವರೆಗಿನ ಪ್ರಾಥಮಿಕ ಶಾಲೆಗಳು ಅನುದಾನಕ್ಕೆ ಒಳಪಡಬೇಕಾಗಿದೆ.

ರಾಜ್ಯದಲ್ಲಿ ಕೋಳಿ ಮೊಟ್ಟೆ ಮಂಡಳಿಯ ರಚನೆ

(873): ಶ್ರೀ. ಕೆ.ಹೆಚ್. ಹನುಮೇಗೌಡ (ಹಾಸನ):–

ಮಾನ್ಯ ಪಶು ಸಂಗೋಪನಾ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ ಉತ್ತರಿಸುವರೇ ?

ಅ) ರಾಜ್ಯದಲ್ಲಿ ಕೋಳಿ ಸಾಗಾಣಿಕೆದಾರರ ಹಿತದೃಷ್ಟಿಯಿಂದ ಮೊಟ್ಟೆ ಮಂಡಳಿ ರಚಿಸಬೇಕೆಂ ವಿಚಾರ ಎರಡು ವರ್ಷಗಳ ಹಿಂದೆ ಸರ್ಕಾರದ ಮುಂದಿದ್ದುದು ನಿಜವಲ್ಲವೆ;

ಆ) ಹಾಗಿದ್ದಲ್ಲಿ, ಸದರಿ ಮಂಡಳಿಯ ರಚನೆಗೆ ಸರ್ಕಾರವು ಹೂಡಲಿರುವ ಬಂಡವಾಳ ಮೊತ್ತವೆಷ್ಟು;

ಇ) ಈ ಮೊಟ್ಟೆ ಮಂಡಳಿ ರಚನೆಯಿಂದ ಸಾರ್ವಜನಿಕರಿಗೆ ಮತ್ತು ಕೋಳಿ ಫಾರಂ ನಡೆಸು ರೈತರುಗಳಿಗೆ ದೊರೆಯಲಿರುವ ಅನುಕೂಲಗಳಾವುವು ? (ವಿವರ ನೀಡುವುದು.)

ಶ್ರೀ ಕೆ.ಎನ್. ನಾಗೇಗೌಡ (ಪಶುಸಂಗೋಪನಾ ರಾಜ್ಯ ಸಚಿವರು):–

ಅ) ನಿಜ.

ಆ) ಅಂದಿನ ಅಂದಾಜು – 287.33 ರೂ.ಲಕ್ಷಗಳಲ್ಲಿ.

ಇ) ಮೊಟ್ಟೆ ಮಂಡಳಿ ರಚಿಸಿದಲ್ಲಿ ಸಾರ್ವಜನಿಕರಿಗೆ ಉತ್ತಮ ಕೋಳಿ ಮತ್ತು ಮೊ ದೊರಕುವುದು ಹಾಗೂ ಕೋಳಿ ಫಾರಂ ನಡೆಸುವವರಿಗೆ ಲಾಭಕರ ದರದಲ್ಲಿ ಮಾರಾಟ ಸೌ ದೊರಕುವುದು.